**CC 900/2022**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 900/2022

**ಸಿ ಡಬ್ಲೂ** 19
**ಪಿ ಡಬ್ಲೂಃ** 14

| | |
|---|---|
| **ಸಾಕ್ಷಿಯ ಹೆಸರು -** | **ರಾಘವೇಂದ್ರ** |
| **ತಂದೆಯ ಹೆಸರು -** | **ಸುಬ್ಬಯ್ಯ** |
| **ವಯಸ್ಸು -** | 43 **ವರ್ಷಗಳು** |
| **ಉದ್ಯೋಗ -** | **ಮುಖ್ಯ ಪೇದೆ, ಗ್ರಾಮೀಣ ಪೋಲಿಸ್ ಠಾಣೆ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 21-01-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **2021** ರಿಂದ **2022** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **22-11-2021** ರಂದು ಬೆಳಿಗ್ಗೆ **11.00** ಗಂಟೆಗೆ ಚಾಸಾ **-1** ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ ಠಾಣಣಾ ಗುನ್ನೆ ಸಂಖ್ಯೆ **141/2021** ರಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿಃ **1** ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ **1(**ಬಿ**)** ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **15** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **15(**ಎ**)** ಎಂದು ಗುರುತಿಸಲಾಯಿತು.

ಅದೇ ದಿನ ಪಿರ್ಯಾದುದಾರರ ಮನೆಯ ಹತ್ತಿರ ಮತ್ತು ಮೀರ್ ಆಲಂ ದರ್ಗಾದ ಹತ್ತಿರ ಪಿರ್ಯಾದುದಾರರು ತೋರಿಸಿದ ಸ್ಥಳಗಳಲ್ಲಿ ಚಾಸಾ **-2** ಮತ್ತು **3** ರವರ ಸಮಕ್ಷಮ ಸಂಜೆ **5.00** ಗಂಟೆಯಿಂದ **7.00** ಗಂಟೆಯ ವರೆಗೆ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ಸಾಕ್ಷಿ ನಿಪಿಃ **2** ರ ಪಂಚನಾಮೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸಹಿಯನ್ನು ನಿಪಿಃ **2(**ಸಿ**)** ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿಃ **3** ರ

ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ -20 ರವರು ನನ್ನಿಂದ ಪಡೆದಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್ ವಕೀಲರಿಂದ</u>**

ಪಂಚನಾಮೆ ಮಾಡಲು ಹೋದಾಗ ಠಾಣೆಯಿಂದ ನಾನು ಮತ್ತು ಮುಖ್ಯಪೇದೆ ನಾಗರಾಜ ಮತ್ತು ಗಾದಿಲಿಂಗಪ್ಪ ಹೋಗಿರುತ್ತೇವೆ ಎಂದು ಪಂಚನಾಮೆಯಲ್ಲಿ ಬರೆದಿರುತ್ತೇನೆ. ಚಾಸಾ -2 ಮತ್ತು 3 ಪಿರ್ಯಾದುದಾರರ ಮನೆಯ ಹತ್ತಿರದ ವ್ಯಕ್ತಿಗಳು ಅಂದರೆ ಸರಿ. ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ, ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ಪಂಚನಾಮೆ ಯನ್ನು ಸ್ಥಳದಲ್ಲಿ ಬರೆದಿಲ್ಲ ಅಂದರೆ ಸರಿಯಲ್ಲ. ಪಂಚನಾಮೆ ಮತ್ತು ಫೋಟೋಗಳನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಪಿರ್ಯಾದುದಾರರು ಠಾಣೆಗೆ ಕರೆದುಕೊಡು ಬಂದಿದ್ದ ಪಂಚರಿಂದ ಪಂಚನಾಮೆಗೆ ಸಹಿ ಮಾಡಿಸಿಕೊಂಡು ಠಾಣೆಯಲ್ಲಿಯೇ ಅದನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ಚಾಸಾ -1 ರವರು ನೀಡಿದ್ದ ದೂರು ಸುಳ್ಳಿನಿಂದ ಕೂಡಿದೆ ಎಂದು ಗೊತ್ತಿದ್ದರೂ ಸಹ ಸದರಿಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸೃಷ್ಟಿ ಮಾಡಿ, ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.